**ದಿನಾಂಕಃ 26-11-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಕೊವಿಡ್–19 ರ ಮುಂಜಾಗ್ರತೆ ಕ್ರಮವಾಗಿ, ಎಸ್.ಓ.ಪಿ ಅನುಸಾರ, ಸಾಕ್ಷಿಯು ಮಾಸ್ಕ್ ಅನ್ನು ಧರಿಸಿದ್ದು, ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಲಾಗಿರುತ್ತದೆ ಮತ್ತು ಸ್ಯಾನಿಟೈಸರ್ ಅನ್ನು ಉಪಯೋಗಿಸಲಾಗಿರುತ್ತದೆ. ಸಾಕ್ಷಿಯು ಈ ದಿನ ಕೋವಿಡ್–19 ರ ಕುರಿತು ರಾಪಿಡ್ ಆ್ಯಂಟಿಜನ್ ಟೆಸ್ಟ್‌ಗೆ ಒಳಗಾಗಿದ್ದು , ಸದರಿ ಪರಿಕ್ಷೆಯಲ್ಲಿ ನೆಗೆಟಿವ್ ಬಂದಿದ್ದು. ಸಾಕ್ಷಿಗೆ ಕೋವಿಡ್–19 ರ ಕುರಿತು ಲಕ್ಷಣಗಳು ಕಂಡು ಬಂದಿರುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದು, ಆ ಕಾರಣ ಸಾಕ್ಷಿಗೆ ಖುದ್ದು ಹಾಜರಾತಿಗೆ ಅನುಮತಿಸಲಾಗಿರುತ್ತದೆ. ಎಲ್ಲಾ ರೀತಿಯ ಮುಂಜಾಗ್ರತೆ ಕ್ರಮಗಳನ್ನು ಕೊವಿಡ್–19 ರ ಪ್ರಯುಕ್ತವಾಗಿ ಇರುವ ನಿರ್ದೇಶನಗಳನ್ನು ಪಾಲಿಸಲಾಗಿರುತ್ತದೆ.

**ಮುಂದುವರೆದ ಪಾಟೀಸವಾಲು ಃ ಶ್ರೀ ಆರ್ ವಿ ವಕೀಲರಿಂದ**

1 ನೇ ಪ್ರತಿವಾದಿಗೆ ಒಬ್ಬನೇ ಮಗನಿರುತ್ತಾನೆ , ಹೆಣ್ಣುಮಕ್ಕಳಿರುವುದಿಲ್ಲ . 1 ನೇ ಪ್ರತಿವಾದಿಯ ಹೆಣ್ಣುಮಕ್ಕಳಾದ ನೀಲಮ್ಮ , ಕವಿತಮ್ಮ , ಅಮೃತಮ್ಮ ಮದುವೆ ಮಾಡಿಕೊಂಡು ತಮ್ಮ ಗಂಡನ ಮನೆಯಲ್ಲಿರುತ್ತಾರೆ ಎಂದರೆ ಸರಿ .

ಸದರಿ ಪತ್ರವನ್ನು ಬರೆಯಲು 1 ನೇ ಪ್ರತಿವಾದಿ ಮತ್ತು ಎಂ ಎಸ್ ಶಂಕರಪ್ಪ ರವರು ತಂದಿದ್ದರು . ಆ ಪತ್ರವನ್ನು ಸೌಹಾರ್ದ ಬ್ಯಾಂಕಿನಲ್ಲಿ ತಂದಿದ್ದರು. ಪತ್ರವು ರೂ . 200/- ಗಳ ಮೌಲ್ಯದಾಗಿತ್ತು . ಎಂ ಎಸ್ ಶಂಕರಪ್ಪನವರ ಜಮೀನುಗಳನ್ನು ನಾನೇ ನೋಡಿಕೊಳ್ಳುತ್ತೇನೆ ಎಂದರೆ ಸರಿಯಲ್ಲ . ನಾನು ಸುಳ್ಳು ಹೇಳುತ್ತಿದ್ದೇನೆ , ಪತ್ರವನ್ನು ನಾನು ಮತ್ತು ಅವರು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪತ್ರವನ್ನು ಕೂಲ್ಲಾಪುರದ ದೇವಸ್ಥಾನದ ಹತ್ತಿರ ಬರೆಯಲಾಗಿದೆ . ಪತ್ರವನ್ನು ಎಂ ಎಸ್ ಶಂಕರಪ್ಪ ಬರೆದಿರುತ್ತಾರೆ. ದಾಖಲಾತಿಗಳನ್ನು ತಂದಿರಲಿಲ್ಲ . ಪತ್ರವನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯ ವರೆಗೆ ಬರೆದರು ಎಂದು ಹೇಳಲು ಆಗುವುದಿಲ್ಲ . ಪತ್ರವನ್ನು ಬರೆಯುವ ಕಾಲಕ್ಕೆ ನಾನು , 1 ನೇ ಪ್ರತಿವಾದಿ , ಮುದ್ದಪ್ಪ , ಈರಣ್ಣ , ಎಂ ಎಸ್ ಶಂಕರಪ್ಪ ಮತ್ತು ಶಿವಣ್ಣ ಹಾಜರಿದ್ದೆವು . ಪತ್ರಕ್ಕೆ ಮುದ್ದಪ್ಪ ಮತ್ತು ಈರಣ್ಣ ಸಾಕ್ಷಿ ಅಂತ ಸಹಿ ಮಾಡಿರುತ್ತಾರೆ . ಪತ್ರಕ್ಕೆ ಯಾರು ತೆಲುಗಿನಲ್ಲಿ , ಇಂಗ್ಲೀಷಿನಲ್ಲಿ , ಕನ್ನಡದಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಪತ್ರಕ್ಕೆ ಶಿವಣ್ಣ ಇಂಗ್ಲೀಷಿನಲ್ಲಿ ಸಹಿ ಹಾಕಿರುತ್ತಾರೆ , ಉಳಿದವರು ಕನ್ನಡದಲ್ಲಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ಎಲ್ಲರೂ ಒಂದೇ ಪೆನ್ನಿನಿಂದ ಸಹಿ ಹಾಕಿರುತ್ತಾರೋ ಅಥವಾ ಬೇರೆ ಬೇರೆ ಪೆನ್ನಿನಿಂದ ಸಹಿ ಹಾಕಿರುತ್ತಾರೋ ನನಗೆ ಗೊತ್ತಿಲ್ಲ .

ಓ ಎಸ್ ನಂ 243/2016 ದಾವೆಯು ನನ್ನ ಮತ್ತು ಪ್ರತಿವಾದಿಗಳ ಮಧ್ಯೆ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ . ಸದರಿ ದಾವಾ ಆಸ್ತಿಯ ಸ ನಂ 2 , ಕೃಷ್ಣಗಿರಿ ಗ್ರಾಮದ್ದು ಎಂದರೆ ಸರಿ . ಕನ್ನಮೇಡಿ ಗ್ರಾಮದ ಜಮೀನಿನ ಹುಣಸೆ ಮರಗಳನ್ನು ಹರಾಜು ಮೂಲಕ ಕೊಡಲಾಗಿದೆ . ನಾನು ಕ್ರಯ ಕರಾರು ಪತ್ರ ಬರೆಸಿಕೊಂಡಾಗ 1 ನೇ ಪ್ರತಿವಾದಿ ಹೆಸರಿಗೆ ಪಹಣಿ ಪತ್ರಿಕೆ ಇರಲಿಲ್ಲ ಎಂದರೆ ಸರಿ , ಸಾಕ್ಷಿ ಮುಂದುವರೆದು ಆಸ್ತಿಗಳಲ್ಲಿ 1 ನೇ ಪ್ರತಿವಾದಿ ಭಾಗ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ . ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ . ಇಂದಿಗೂ ದಾವಾ ಆಸ್ತಿಯ ಪಹಣಿ ಪತ್ರಿಕೆ ಬೋರಪ್ಪ , ಅವರ ತಂದೆ ಹಾಗೂ ಅವರ ಸಹೋದರರ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ .

ನಾನು , ಸಾಕ್ಷಿದಾರರು , ಪತ್ರ ಬರಹಗಾರರು ಸೇರಿಕೊಂಡು ಕ್ರಯ ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ . ಕ್ರಯ ಕರಾರು ಪತ್ರವನ್ನು ಕೊಲ್ಲಾಪುರಮ್ಮನ ದೇವಸ್ಥಾನದ ಬಳಿ ಬರೆದಿಲ್ಲ , ಪ್ರತಿವಾದಿ ಸಹಿ ಮಾಡಿಲ್ಲ , ನಾನು ದಾಖಲಾತಿಯನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ . ನಾನು ಕರಾರಿನಂತೆ ಹಣವನ್ನು ಪ್ರತಿವಾದಿಗೆ ಕೊಟ್ಟಿಲ್ಲ , ಇಂದಿಗೂ ಪ್ರತಿವಾದಿಯರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ . 20 ವರ್ಷಗಳಿಂದ ನಮಗೂ ಮತ್ತು ಪ್ರತಿವಾದಿಗಳಿಗೂ ವ್ಯಾಜ್ಯ ಇರುವುದರಿಂದ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ಜಂಟಿಯಾಗಿರುವುದರಿಂದ , ಪ್ರತಿವಾದಿಯರಿಗೆ ಮಾರುವ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿಯು ಮತ್ತೆ ಏಕೆ ಅವರು ಸಹಿ ಮಾಡಿಕೊಟ್ಟು ಹಣವನ್ನು ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ . ನಾನು ಮತ್ತು ಎಂ ಎಸ್ ಶಂಕರಪ್ಪ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ . ದಾವಾ ಆಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಪತ್ರಕ್ಕೆ ಬೋರಪ್ಪ ಮತ್ತು ಶಿವಣ್ಣ ಸಹಿ ಹಾಕಿಲ್ಲ , ನಾವೇ ಅವುಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ . ದಾವಾ ಆಸ್ತಿ 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ . ದಾವಾ ಆಸ್ತಿ ಮೊದಲು ಕುರಿಚಿಕ್ಕಣ್ಣನ ಹೆಸರಿಗೆ ಇತ್ತು . ಪತ್ರಕ್ಕೆ 1 ನೇ ಪ್ರತಿವಾದಿಯ ಹೆಣ್ಣು ಮಕ್ಕಳು ಸಹಿ ಮಾಡಿಲ್ಲ ಎಂದರೆ ಸರಿ .

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ**
**ಪಾವಗಡ.**